All India Radio: Bangalore
National Bulletin In Kannada
15.09.2025 01.10 p.m.
ಆಕಾಶವಾಣಿ, ಬೆಂಗಳೂರು
ರಾಷ್ಟ್ರೀಯ ವಾರ್ತೆಗಳು
15.09.2025 01.10 p.m.

ಮುಖ್ಯಾಂಶಗಳು

೧. ನವದೆಹಲಿಯಲ್ಲಿಂದು ಸಂಯುಕ್ತ ಸೇನಾಧಿಕಾರಿ ಸಮ್ಮೇಳನ ಆಯೋಜನೆ ; ಉದ್ಘಾಟನೆ ನೆರವೇರಿಸಲಿರುವ ಪ್ರಧಾನಿ ನರೇಂದ್ರ ಮೋದಿ

೨. ದೇಶಾದ್ಯಂತ ಇಂದು ಸರ್.ಎಂ. ವಿಶ್ವೇಶ್ವರಯ್ಯ ಸ್ಮರಣಾರ್ಥ ಅಭಿಯಂತರರ ದಿನಾಚರಣೆ - ಪ್ರಧಾನಿ ಗೌರವ ನಮನ

೩. ವಕ್ಫ್ ತಿದ್ದುಪಡಿ ಕಾಯ್ದೆಯ ಕೆಲವು ನಿಬಂಧನೆಗಳಿಗೆ ತಡೆಯಾಜ್ಞೆ ನೀಡಿದ ಸುಪ್ರೀಂಕೋರ್ಟ್

೪. ಸ್ಪೀಡ್ ಸ್ಕೇಟಿಂಗ್ ವಿಶ್ವ ಚಾಂಪಿಯನ್‌ಶಿಪ್ ; ಭಾರತಕ್ಕೆ ಮೊಟ್ಟಮೊದಲ ಪದಕ ತಂದುಕೊಟ್ಟ ಆನಂದ ಕುಮಾರ್ ವೇಲ್ ಕುಮಾರ್

><><><><><><

ಕೊಲ್ಕತ್ತಾದ ವಿಜಯದುರ್ಗ್‌ನಲ್ಲಿರುವ ಭಾರತೀಯ ಸೇನೆಯ ಪೂರ್ವ ಕಮಾಂಡ್‌ನ ಪ್ರಧಾನ ಕಚೇರಿಯಲ್ಲಿಂದು ನಡೆಯುವ ಸಂಯುಕ್ತ ಸೇನಾಧಿಕಾರಿಗಳ ಸಭೆಗೆ ಪ್ರಧಾನಿ ನರೇಂದ್ರ ಮೋದಿ ಚಾಲನೆ ನೀಡಲಿದ್ದಾರೆ. ಈ ಸಭೆ ಇದೇ ೧೭ರವರೆಗೆ ನಡೆಯಲಿದೆ. ಈ ಸಂದರ್ಭದಲ್ಲಿ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಉಪಸ್ಥಿತರಿರಲಿದ್ದಾರೆ. ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ನಿನ್ನೆ ಸಂಜೆ ಕೊಲ್ಕತ್ತಾಕ್ಕೆ ಆಗಮಿಸಿದ್ದು, ರಾಜಭವನದಲ್ಲಿ ರಾತ್ರಿ ತಂಗಿದ್ದಾರೆ. ಮೂರು ದಿನಗಳ ಈ ಸಭೆಯಲ್ಲಿ ತಾಂತ್ರಿಕ ಅಭಿವೃದ್ಧಿ, ಸಶಸ್ತ್ರ ಪಡೆಗಳ ಮೂರು ಪಡೆಗಳ ನಡುವಿನ ಸಹಕಾರ, ಸೇನೆಯ ಆಧುನೀಕರಣ ಹಾಗೂ ಪ್ರಸ್ತುತ ಜಾಗತಿಕ ರಾಜಕೀಯ ಪರಿಸ್ಥಿತಿಯ ಹಿನ್ನೆಲೆಯಲ್ಲಿ ಹಲವಾರು ಪ್ರಮುಖ ವಿಚಾರಗಳ ಬಗ್ಗೆ ಚರ್ಚೆ ನಡೆಯಲಿದೆ.

><><><><><><

ಚುನಾವಣೆಗೆ ಸಜ್ಜಾಗುತ್ತಿರುವ ಬಿಹಾರದ ಪುರ್ನಿಯಾ ಜಿಲ್ಲೆಯಲ್ಲಿ ೪೦ ಸಾವಿರ ಕೋಟಿ ರೂಪಾಯಿಗೂ ಅಧಿಕ ಮೌಲ್ಯದ ಅಭಿವೃದ್ಧಿ ಯೋಜನೆಗಳಿಗೆ ಇಂದು ಪ್ರಧಾನಿ ನರೇಂದ್ರ ಮೋದಿ ವಿಡಿಯೋ ಕಾನ್ಫರೆನ್ಸ್ ಮೂಲಕ ಚಾಲನೆ ನೀಡಲಿದ್ದಾರೆ. ಇದೇ ಸಂದರ್ಭದಲ್ಲಿ ಉತ್ತರ ಬಿಹಾರದಲ್ಲಿನ ಹೊಸ ವಿಮಾನ ನಿಲ್ದಾಣದ ಟರ್ಮಿನಲ್‌ನ ಉದ್ಘಾಟನೆ ಕೂಡ ನಡೆಯಲಿದೆ. ಪ್ರಧಾನಿ, ರಾಷ್ಟ್ರೀಯ ಮಖಾನಾ ಮಂಡಳಿಯ ಉದ್ಘಾಟನೆಯನ್ನು ಸಹ ನೆರವೇರಿಸಲಿದ್ದಾರೆ. ಈ ಮಂಡಳಿಯ ಸ್ಥಾಪನೆಯ ಬಗ್ಗೆ ಈ ವರ್ಷ ಕೇಂದ್ರ ಆಯವ್ಯಯದಲ್ಲಿ ಘೋಷಿಸಲಾಗಿತ್ತು. ಇದೇ ವೇಳೆ ಪ್ರಧಾನಿ ಸಾರ್ವಜನಿಕ ಸಭೆಯನ್ನುದ್ದೇಶಿಸಿ ಭಾಷಣ ಮಾಡಲಿದ್ದಾರೆ. ಸಾಮಾಜಿಕ ಮಾಧ್ಯಮ ಪೋಸ್ಟ್‌ನಲ್ಲಿ ಪ್ರಧಾನಿ, ಮಖಾನಾ ಮತ್ತು ಬಿಹಾರದ ಸಂಬಂಧ ಬಹಳ ಗಾಢವಾಗಿದೆ. ರಾಷ್ಟ್ರೀಯ ಮಖಾನಾ ಮಂಡಳಿಯಿಂದ ಈ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸುವ ಸಾವಿರಾರು ರೈತರಿಗೆ ಲಾಭವಾಗಲಿದೆ ಎಂದು ತಿಳಿಸಿದ್ದಾರೆ. ವಿದ್ಯುತ್ ವಲಯಕ್ಕೆ ಸಂಬಂಧಿಸಿದಂತೆ ಪ್ರಧಾನಿ, ಬಾಗಲ್ಪುರ್‌ನಲ್ಲಿ ೨ ಸಾವಿರದ ೪೦೦ ಮೆಗಾವ್ಯಾಟ್ ಉಷ್ಣವಿದ್ಯುತ್ ಯೋಜನೆಗೆ ಶಂಕುಸ್ಥಾಪನೆ ನೆರವೇರಿಸಲಿದ್ದಾರೆ.

><><><><><><><

ದೇಶ ಕಂಡ ಶ್ರೇಷ್ಠ, ತಂತ್ರಜ್ಞ, ಭಾರತ ರತ್ನ, ಸರ್. ಮೋಕ್ಷಗುಂಡಂ ವಿಶ್ವೇಶ್ವರಯ್ಯ ಅವರ ಜನ್ಮದಿನವಾದ ಇಂದು ಅವರ ಸ್ಮರಣಾರ್ಥ ದೇಶಾದ್ಯಂತ ಈ ದಿನವನ್ನು ಅಭಿಯಂತರರ ದಿನವನ್ನಾಗಿ ಆಚರಿಸಲಾಗುತ್ತಿದೆ. ಅಭಿಯಂತರರ ದಿನವಾದ ಇಂದು ಭಾರತದ ಇಂಜಿನಿಯರಿಂಗ್ ಕ್ಷೇತ್ರದಲ್ಲಿ ತಮ್ಮ ಕೊಡಗೆಗಳ ಮೂಲಕ ಅಚ್ಚಳಿಯದ ಗುರುತು ಉಳಿಸಿರುವ ಭಾರತ ರತ್ನ ಸರ್. ಮೋಕ್ಷಗುಂಡಂ ವಿಶ್ವೇಶ್ವರಯ್ಯ ಅವರಿಗೆ ಪ್ರಧಾನಿ ನರೇಂದ್ರ ಮೋದಿ ಗೌರವನಮನ ಸಲ್ಲಿಸಿದ್ದಾರೆ. ಇದೇ ವೇಳೆ ಅವರು, ವಿವಿಧ ವಲಯಗಳಾದ್ಯಂತ ತಮ್ಮ ಕ್ರಿಯಾತ್ಮಕತೆ ಮತ್ತು ಬದ್ಧತೆಯ ಮೂಲಕ ನಾವೀನ್ಯತೆಯನ್ನು ಉತ್ತೇಜಿಸಿ, ಸವಾಲುಗಳನ್ನು ಸಮರ್ಥವಾಗಿ ಎದುರಿಸುತ್ತಿರುವ ಎಲ್ಲ ಅಭ್ಯಂತರರಿಗೆ ಶುಭಾಶಯ ಕೋರಿದ್ದಾರೆ. ಇದೇ ರೀತಿ ಕೇಂದ್ರ ಗೃಹ ಸಚಿವ ಅಮಿತ್ ಶಾ ಸರ್.ಎಂ. ವಿಶ್ವೇಶ್ವರಯ್ಯ ಅವರಿಗೆ ಗೌರವ ನಮನ ಸಲ್ಲಿಸಿದ್ದಾರೆ. ಸಾಮಾಜಿಕ ಮಾಧ್ಯಮದಲ್ಲಿ ಅವರು, ಸರ್.ಎಂ. ವಿಶ್ವೇಶ್ವರಯ್ಯ ಅವರನ್ನು, ಭಾರತವನ್ನು ಪರಿವರ್ತನೆಯ ಹಾದಿಯಲ್ಲಿ ಮುನ್ನಡೆಸಿದ ಶ್ರೇಷ್ಠ ತಂತ್ರಜ್ಞ ಎಂದು ಕರೆದಿದ್ದಾರೆ. ಇದೇ ವೇಳೆ ಅವರು, ದೇಶ ತಂತ್ರಜ್ಞಾನ ಕ್ಷೇತ್ರದಲ್ಲಿ ವೇಗವಾಗಿ ಪ್ರಗತಿ ಹೊಂದಲು

ತಮ್ಮ ದೃಷ್ಟಿಕೋನ, ನಾವೀನ್ಯತೆ ಮತ್ತು ಬದ್ಧತೆಯ ಮೂಲಕ ಶ್ರಮಿಸುತ್ತಿರುವ ಎಲ್ಲಾ ಇಂಜಿನಿಯರ್‌ಗಳನ್ನು ಶ್ಲಾಘಿಸಿದ್ದಾರೆ.

><><><><><><><

ಪವಿತ್ರ, ಗಂಗೆ ಸಾರ್ವಜನಿಕ ಸೇವೆ ಮತ್ತು ಉತ್ತಮ ಆಡಳಿತದ ಧ್ಯೇಯದೊಂದಿಗೆ ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರ ದೇಶದಲ್ಲಿ ಪರಿವರ್ತನೆ ಮತ್ತು ಪ್ರಗತಿಯನ್ನು ತರಲು ಅವಿರತವಾಗಿ ಶ್ರಮಿಸುತ್ತಿದೆ. ಈ ಹಿನ್ನೆಲೆಯಲ್ಲಿ ಆಕಾಶವಾಣಿ ಪ್ರಸ್ತುತಪಡಿಸುತ್ತಿರುವ ವಿಶೇಷ ಸರಣಿ - "ಸೇವಾ ಪರ್ವ" ದಲ್ಲಿಂದು, ಕೇಂದ್ರ ಸರ್ಕಾರ ನಮಾಮಿ ಗಂಗೆ ಅಭಿಯಾನದ ಮೂಲಕ ಪವಿತ್ರ ಗಂಗಾ ನದಿಯನ್ನು ಯಾವ ರೀತಿ ಪರಿವರ್ತಿಸಿದೆ ಎಂಬುವುದರ ಕುರಿತ ಒಂದು ವಿಶೇಷ ವರದಿ ಇಲ್ಲಿದೆ.

ಧ್ವನಿ ಸೌಮ್ಯ ಹೆಚ್.ಪಿ.( ೧ ನಿಮಿಷ ೨೨ ಸೆಕೆಂಡ್‌ಗಳು)

ಪವಿತ್ರ ಗಂಗಾನದಿ ಭಾರತದ ಜೀವನಾಡಿಯಾಗಿದೆ. ೨೦೧೪ರ ಜೂನ್‌ನಲ್ಲಿ ಕೇಂದ್ರ ಸರ್ಕಾರ ಪ್ರಾರಂಭಿಸಿದ ನಮಾಮಿ ಗಂಗೆ ಅಭಿಯಾನ, ಗಂಗಾ ನದಿಯ ಶುಚಿತ್ವ ಹೆಚ್ಚಿಸಿ ಅದರ ಆರೋಗ್ಯವನ್ನು ಮರುಸ್ಥಾಪಿಸುವ ಮಹತ್ವಾಕಾಂಕ್ಷಿ ಮತ್ತು ಸಮಗ್ರ ಉಪಕ್ರಮವಾಗಿದೆ. ಗಂಗಾನದಿಯ ಸ್ವಚ್ಛಗೊಳಿಸುವಿಕೆ ನಮ್ಮೆಲ್ಲರ ಸಾಮೂಹಿಕ ಜವಾಬ್ದಾರಿಯಾಗಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಅಭಿಪ್ರಾಯಪಟ್ಟಿದ್ದಾರೆ. ನಮಾಮಿ ಗಂಗೆ ಮಾಲೀನ್ಯ ನಿಯಂತ್ರಣ, ಪರಿಸರದ ಪುನರ್‌ಸ್ಥಾಪನೆ, ಸಾಮರ್ಥ್ಯವೃದ್ಧಿ ಮತ್ತು ಸಮೂದಾಯ ತೊಡಗಿಸಿಕೊಳ್ಳುವಿಕೆಯನ್ನು ಸಂಯೋಜಿಸುವ ಬಹುಮುಖಿ ಉಪಕ್ರಮವಾಗಿದೆ. ಇದು ನದಿಯ ಶುಚಿತ್ವದ ಜೊತೆಗೆ ಅದನ್ನು ಅವಲಂಬಿಸಿರುವ ಲಕ್ಷಾಂತರ ಜನರ ಜೀವನೋಪಾಯದ ಮೇಲೂ ಕೇಂದ್ರೀಕರಿಸುತ್ತದೆ. ಮಾಲಿನ್ಯ ನಿಯಂತ್ರಣದಲ್ಲಿ ಈ ಕಾರ್ಯಕ್ರಮ ಗಮನಾರ್ಹ ಪ್ರಗತಿ ಸಾಧಿಸಿದೆ. ಒಳಚರಂಡಿ ಸಂಸ್ಕರಣಾ ಸಾಮರ್ಥ್ಯ ೨೦೧೪ರ ಹಿಂದಿನ ಅವಧಿಗೆ ಹೋಲಿಸಿದರೆ ೩೦ ಪಟ್ಟು ಹೆಚ್ಚಿದೆ. ಗ್ಯಾಂಜೆಟಿಕ್ ಡಾಲ್ಫಿನ್‌ಗಳ ಸಂಖ್ಯೆಯಲ್ಲಿ ಹೆಚ್ಚಳದಿಂದ ನದಿ ಪರಿಸರ ವ್ಯವಸ್ಥೆಯಲ್ಲಿ ಸುಧಾರಣೆಯಾಗಿದೆ. ವಾಸ್ತವವಾಗಿ ಈಗ ಈ ಹಿಂದೆ ವರದಿಯಾಗದ ಗಂಗಾನದಿಯ ಪ್ರದೇಶಗಳಲ್ಲಿ ಡಾಲ್ಫಿನ್‌ಗಳು ಕಂಡು ಬರುತ್ತಿವೆ. ಒಂದು ಕಾಲದಲ್ಲಿ ಅಸಾಧ್ಯ ಎಂದು ಪರಿಗಣಿಸಲ್ಪಟ್ಟ ಈ ಕೆಲಸ ಈಗ ನರೇಂದ್ರ ಮೋದಿ ಅವರ ನೇತೃತ್ವದಲ್ಲಿ ರಾಷ್ಟ್ರೀಯ

ಆಂದೋಲನವಾಗಿ ಪರಿವರ್ತಿಸಲಾಗಿದೆ. ದೀರ್ಘಕಾಲದಿಂದ ನಿರ್ಲಕ್ಷ್ಯಕ್ಕೆ ಒಳಗಾಗಿದ್ದ ಪವಿತ್ರ ಗಂಗಾನದಿ ಈಗ ಹೊಸ ಭರವಸೆಯೊಂದಿಗೆ ಹರಿಯುತ್ತಿದೆ.

><><><><><><

ವಕ್ಫ್ ತಿದ್ದುಪಡಿ ೨೦೨೫ರ ಕೆಲವು ನಿಬಂಧನೆಗಳಿಗೆ ಸುಪ್ರೀಂಕೋರ್ಟ್ ಇಂದು ತಡೆಯಾಜ್ಞೆ ಘೋಷಿಸಿದೆ. ಇಂದು ನೀಡಿದ ತೀರ್ಪಿನಲ್ಲಿ ಭಾರತದ ಮುಖ್ಯ ನ್ಯಾಯಮೂರ್ತಿ ಬಿ.ಆರ್. ಗವಾಯಿ ಮತ್ತು ನ್ಯಾಯಮೂರ್ತಿ ಎ.ಜಿ. ಮಸೀಹ್ ಅವರನ್ನೊಳಗೊಂಡ ಪೀಠ, ವಕ್ಫ್ ರಚಿಸಲು ಒಬ್ಬ ವ್ಯಕ್ತಿ ೫ ವರ್ಷಗಳ ಕಾಲ ಇಸ್ಲಾಂ ಧರ್ಮದ ಅನುಯಾಯಿಯಾಗಿರಬೇಕೆಂಬ ನಿರ್ಣಯದ ಕುರಿತು ರಾಜ್ಯ ಸರ್ಕಾರಗಳು ನಿಯಮಗಳನ್ನು ರೂಪಿಸುವವರೆಗೆ ಈ ನಿಬಂಧನೆಯನ್ನು ತಡೆ ಹಿಡಿದಿದೆ. ವಕ್ಫ್ ಆಸ್ತಿ ಸರ್ಕಾರಿ ಆಸ್ತಿಯನ್ನು ಅತಿಕ್ರಮಣ ಮಾಡಿದೆಯೇ ಎಂಬ ವಿವಾದದ ಇತ್ಯರ್ಥಕ್ಕೆ ಸರ್ಕಾರಿ ಅಧಿಕಾರಿಗೆ ಅಧಿಕಾರ ನೀಡುವ ನಿಬಂಧನೆಯನ್ನು ತಡೆ ಹಿಡಿದಿರುವ ಪೀಠ ಕಾರ್ಯ ನಿರ್ವಾಹಕ ಅಧಿಕಾರಿ ವೈಯಕ್ತಿಕ ನಾಗರಿಕ ಹಕ್ಕುಗಳನ್ನು ನಿರ್ಣಯಿಸಲು ಅನುಮತಿ ಇಲ್ಲ ಎಂದು ಅಭಿಪ್ರಾಯಪಟ್ಟಿದೆ. ವಕ್ಫ್ ಮಂಡಳಿಗಳಿಗೆ ಮುಸ್ಲಿಂಯೇತರ ಸದಸ್ಯರ ನಾಮ ನಿರ್ದೇಶನವನ್ನು ಅನುಮತಿಸುವ ನಿಬಂಧನೆಗೆ ತಡೆಯಾಜ್ಞೆ ನೀಡಲಾಗಿಲ್ಲ. ಆದರೆ ಸಾಧ್ಯವಾದಷ್ಟು ಮಂಡಳಿಯ ಪದನಿಮಿತ್ತ ಸದಸ್ಯರು ಮುಸ್ಲಿಂರಾಗಿರಬೇಕು ಎಂದು ಪೀಠ ಸ್ಪಷ್ಟಪಡಿಸಿದೆ. ಕೇಂದ್ರ ವಕ್ಫ್ ಮಂಡಳಿ ೪ಕ್ಕಿಂತ ಹೆಚ್ಚು ಮುಸ್ಲಿಂಯೇತರ ಸದಸ್ಯರನ್ನು ಹೊಂದಿರಬಾರದು ಮತ್ತು ರಾಜ್ಯ ವಕ್ಫ್ ಮಂಡಳಿಗಳು ಮೂರಕ್ಕಿಂತ ಹೆಚ್ಚು ಸದಸ್ಯರನ್ನು ಹೊಂದಿರಬಾರದು ಎಂದು ನ್ಯಾಯಾಲಯ ಸೂಚಿಸಿದೆ.

><><><><><><

ಏಕೀಕೃತ ಪಾವತಿ ವ್ಯವಸ್ಥೆ ಯುಪಿಐ ಬಳಕೆದಾರರು ಇಂದಿನಿಂದ ಆಯ್ದ ವಿಭಾಗಗಳಿಗೆ ಒಂದೇ ದಿನದಲ್ಲಿ ವ್ಯಕ್ತಿಯಿಂದ ವ್ಯಾಪಾರಿಗೆ ೧೦ ಲಕ್ಷ ರೂಪಾಯಿವರೆಗೆ ವಹಿವಾಟು ನಡೆಸುವುದಾಗಿದೆ. ಭಾರತೀಯ ರಾಷ್ಟ್ರೀಯ ಪಾವತಿ ನಿಗಮ ಎನ್‌ಪಿಸಿಐ ಕಳೆದ ತಿಂಗಳು ಹೊರಡಿಸಿದ ಸುತ್ತೋಲೆಯ ಪ್ರಕಾರ ಹೊಸ ಯುಪಿಐ ನಿಯಮಗಳನ್ನು ಭಾರತೀಯ ಬಳಕೆದಾರರಿಗೆ ಹೆಚ್ಚಿನ ಮೌಲ್ಯದ ಡಿಜಿಟಲ್ ಪಾವತಿಗಳನ್ನು ಸುಲಭ ಮತ್ತು ಹೆಚ್ಚು ಸುರಕ್ಷಿತವಾಗಿ ನಡೆಸಲು ವಿನ್ಯಾಸಗೊಳಿಸಲಾಗಿದೆ. ಆದರೆ

ವ್ಯಕ್ತಿಯಿಂದ ವ್ಯಕ್ತಿಗೆ ಪಿ ಟು ಪಿ ವಹಿವಾಟುಗಳಿಗೆ ಯುಪಿಐ ಮಿತಿ ದಿನಕ್ಕೆ ಒಂದು ಲಕ್ಷ ರೂಪಾಯಿಯೇ ಆಗಿರುತ್ತದೆ.

><><><><><><

ಆದಾಯ ಸಂಗ್ರಹಣೆಯನ್ನು ತ್ವರಿತಗೊಳಿಸಲು, ದೇಶೀಯ ಉದ್ಯಮವನ್ನು ಸರಳೀಕೃತ ಪ್ರಕ್ರಿಯೆಗಳ ಮೂಲಕ ಸಕ್ರಿಯಗೊಳಿಸಲು, ನಾವೀನ್ಯತೆಯನ್ನು ಉತ್ತೇಜಿಸಲು ಮತ್ತು ಉದ್ಯಮವನ್ನು ಬೆಂಬಲಿಸುವ ಉದ್ದೇಶದೊಂದಿಗೆ ರಕ್ಷಣಾ ಸಚಿವ ರಾಜನಾಥ್ ಸಿಂಗ್ ರಕ್ಷಣಾ ಖರೀದಿ ಕೈಪಿಡಿ ೨೦೨೫ ಅನ್ನು ಅನುಮೋದಿಸಿದ್ದಾರೆ. ಆಧುನಿಕ ಯುದ್ಧದ ಯುಗದಲ್ಲಿ ಸಶಸ್ತ್ರ ಪಡೆಗಳ ಉದಯೋನ್ಮುಖ ಅವಶ್ಯಕತೆಗಳನ್ನು ಈ ಪರಿಷ್ಕೃತ ಕೈಪಿಡಿ ಪೂರೈಸುತ್ತದೆ ಎಂದು ರಕ್ಷಣಾ ಸಚಿವಾಲಯ ಹೇಳಿಕೆಯಲ್ಲಿ ತಿಳಿಸಿದೆ. ಇದು ಮೂರು ಪಡೆಗಳ ಸಮನ್ವಯವನ್ನು ಬೆಳೆಸಿ ಮಿಲಿಟರಿ ಸನ್ನದ್ಧತೆಯನ್ನು ತ್ವರಿತ ನಿರ್ಣಯದ ಮೂಲಕ ಅತ್ಯುನ್ನತ ಮಟ್ಟದಲ್ಲಿ ಕಾಯ್ದುಕೊಳ್ಳಲು ಸಹಾಯ ಮಾಡುತ್ತದೆ. ರಕ್ಷಣಾ ಉತ್ಪಾದನೆ ಮತ್ತು ತಂತ್ರಜ್ಞಾನದಲ್ಲಿ ಸ್ವಾವಲಂಬನೆ ಹೆಚ್ಚಿಸುವ ಗುರಿಯನ್ನು ಹೊಂದಿರುವ ಈ ದಾಖಲೆಯಲ್ಲಿ ವ್ಯವಹಾರ ಮಾಡುವುದನ್ನು ಮತ್ತಷ್ಟು ಸರಳಗೊಳಿಸಲಾಗಿದೆ ಎಂದು ಸಚಿವಾಲಯ ತಿಳಿಸಿದೆ.

><><><><><><

ಸ್ಪೀಡ್ ಸ್ಕೇಟಿಂಗ್ ವಿಶ್ವ ಚಾಂಪಿಯನ್‌ಶಿಪ್‌ನಲ್ಲಿ ಭಾರತಕ್ಕೆ ಮೊಟ್ಟಮೊದಲ ಪದಕ ತಂದುಕೊಡುವ ಮೂಲಕ ಭಾರತದ ಆನಂದ ಕುಮಾರ್ ವೆಲ್ ಕುಮಾರ್ ಇತಿಹಾಸ ನಿರ್ಮಿಸಿದ್ದಾರೆ. ೫೦೦ ಮೀಟರ್ ಪ್ಲಸ್ ಡಿ ಓಟ ಸ್ಪರ್ಧೆಯಲ್ಲಿ ಅವರು ಕಂಚಿನ ಪದಕ ಗೆದ್ದಿದ್ದಾರೆ.

><><><><><><

ಖಚಿತ ಗುಪ್ತಚರ ಮಾಹಿತಿಯ ಆಧಾರದ ಮೇಲೆ ಜಾರ್ಖಂಡ್‌ನ ಹಜಾರಿಬಾಗ್ ಜಿಲ್ಲೆಯ ತತಿಜಾರಿಯಾ ಪೊಲೀಸ್ ಠಾಣಾ ವ್ಯಾಪ್ತಿಯ ಕರಂಡಿ ಗ್ರಾಮದಲ್ಲಿ ಇಂದು ಬೆಳಗ್ಗೆ ನಡೆದ ಎನ್‌ಕೌಂಟರ್‌ನಲ್ಲಿ ಮೂವರು ನಕ್ಸಲರು ಹತರಾಗಿದ್ದಾರೆ. ಒಂದು ಕೋಟಿ ರೂಪಾಯಿ ಬಹುಮಾನ ಘೋಷಿಸಲಾಗಿದ್ದ ಸಹದೇವ್ ಸೊರೆನ್ ಅಲಿಯಾಸ್ ಪರ್ವೇಶ್, ೨೫ ಲಕ್ಷ ರೂಪಾಯಿ ಬಹುಮಾನ ಘೋಷಿಸಲಾಗಿದ್ದ ಬಿಹಾರ-ಜಾರ್ಖಂಡ್ ರಘುನಾಥ್ ಹೆಂಬ್ರೋಮ್ ಅಲಿಯಾಸ್ ಚಂಚಲ್ ಮತ್ತು ೧೦ ಲಕ್ಷ ರೂಪಾಯಿ

ಬಹುಮಾನ ಘೋಷಿಸಲಾಗಿದ್ದ ಬಿರ್ಸೆನ್ ಗಂಜು ಅಲಿಯಾಸ್ ರಾಮ್‌ಖೇಲಾವನ್ ಮೃತರಲ್ಲಿ ಸೇರಿದ್ದಾರೆ. ಸ್ಥಳದಿಂದ ಭದ್ರತಾ ಪಡೆಗಳು ಎಕೆ-೪೭ ರೈಫಲ್‌ಗಳು ಸೇರಿದಂತೆ ಶಸ್ತ್ರಾಸ್ತ್ರಗಳನ್ನು ವಶಪಡಿಸಿಕೊಂಡಿವೆ. ನಕ್ಸಲ್ ಪೀಡಿತ ಪ್ರದೇಶಗಳಲ್ಲಿ ಪೊಲೀಸರು ಮತ್ತು ಭದ್ರತಾ ಪಡೆಗಳು ಜಂಟಿಯಾಗಿ ಶೋಧ ಕಾರ್ಯಾಚರಣೆ ನಡೆಸುತ್ತಿವೆ.

><><><><><><><

ಕೇರಳ ವಿಧಾನಸಭೆಯ ೧೨ ದಿನಗಳ ಅಧಿವೇಶನ ಇಂದು ಆರಂಭವಾಗಿದೆ. ಮಾಜಿ ಮುಖ್ಯಮಂತ್ರಿ ವಿ.ಎಸ್. ಅಚ್ಯುತಾನಂದನ್, ಮಾಜಿ ಸ್ಪೀಕರ್ ಪಿ.ಪಿ. ಥಂಕಚನ್ ಮತ್ತು ಶಾಸಕ ವಜೂರ್ ಸೋಮನ್ ಅವರ ನಿಧನವನ್ನು ಉಲ್ಲೇಖಿಸಿದ ನಂತರ ಅಧಿವೇಶನವನ್ನು ಇಂದು ಮುಂದೂಡಲಾಯಿತು. ಅಮಾನತುಗೊಂಡ ಕಾಂಗ್ರೆಸ್ ಶಾಸಕ ರಾಹುಲ್ ಮನ್ಕೂಟ್ಟತಿಲ್ ಅವರಿಗೆ ಪ್ರತ್ಯೇಕ ಬ್ಲಾಕ್‌ನಲ್ಲಿ ಸ್ಥಳ ಹಂಚಿಕೆ ಮಾಡಲಾಗುವುದು ಎಂದು ಸ್ಪೀಕರ್ ಎ.ಎನ್. ಶಂಸೀರ್ ಘೋಷಿಸಿದ್ದಾರೆ.

><><><>END<><><><